Regd No M 1299 34 th Year ತಾ 25—7—51

SATYAVADI

ಸತ್ಯವಾದಿ

ಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಸತ್ಕಾರಕೂಟ

ಮೈಸೂರು : ಶ್ರೀವಸ್ಮಹಾರಾಜರವರು ಲಲಿತ ಮಹಲ್ ಅರಮನೆಯಲ್ಲಿ ನಿನ್ನೆ ಸಂಜೆ ಸತ್ಕಾರಕೂಟವೇರ್ಪಡಿಸಿದ್ದರು.

ಭಾವಾನಗರ ಮಹಾರಾಜರು, ಸಚಿವರು, ಅಧಿಕಾರಿಗಳು, ಗಣ್ಯರು ಆಹ್ವಾನಿತರಾಗಿದ್ದರು.

ವರ್ಧಂತ್ಯುತ್ಸವ

ಮೈಸೂರು ಪ್ರಭುಗಳವರಿಗೆ ನಿನ್ನೆ ದಿನಕ 33 ನೇ ವರ್ಷ ಪ್ರಾರಂಭವಾಯಿತು. ಅರಮನೆಯಲ್ಲಿ ಬೆಳಿಗ್ಗೆ ನಡೆದ ದರ್ಬಾರಿಗೆ ಭಾವನಗರ ಮಹಾರಾಜರು ಮತ್ತಿತರರು ವಿಶೇಷವಾಗಿ ಆಹ್ವಾನಿಸಲ್ಪಟ್ಟಿದ್ದರು. ಸಹಸ್ರಾರು ಮಂದಿ ಪ್ರಜೆಗಳು ಪ್ರಭುಗಳ ದರ್ಶನ ಪಡೆದು ಸಂತೋಷಭರಿತರಾದರು. ಶಾಲೆಗಳಲ್ಲಿ ಸಿಹಿ ಹಂಚಲಾಯಿತು.

ಸೂರ್ತನೀದಿನೋತ್ಸವ

'ಪಾತಾಳ ಭೈರವಿ' ತೆಲಗು ಮಹೋನ್ನತ ಚಿತ್ರದ ನೂರನೇ ದಿನೋತ್ಸವ ಮೈಸೂರು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರ ಗೃಹ ಅಧ್ಯಕ್ಷತೆಯಲ್ಲಿ ಮೊನ್ನೆ ಸಂಜೆ ವೈಭವದಿಂದ ಮೈಸೂರು ರಾಜಕಮಲ ಚಿತ್ರಮಂದಿರದಲ್ಲಿ ನೆರವೇರಿತು. ಸಚಿವ ಶ್ರೀ ಅಂ. ಚನ್ನಿಗರಾಮಯ್ಯನವರು ಆಗಮಿಸಿದ್ದರು. ಚಿತ್ರ ಮಂದಿರದ ಪರವಾಗಿ ಶ್ರೀ ಎಸ್. ವಿ. ಶ್ರೀನಿವಾಸರಾಯರು ಮುಖ್ಯ ಮಂತ್ರಿ ಹಾಗೂ ಚಿತ್ರ ನಿರ್ಮಾಪಕರಿಗೆ ಮಾನಪತ್ರ ಅರ್ಪಿಸಿದರು ಪಾತ್ರಧಾರಿಗಳಿಗೆ ಅಧ್ಯಕ್ಷರ ಹಸ್ತದಿಂದ ಪಾರಿತೋಷಕ ಕೊಡಿಸಲಾಯಿತು. ಆಹ್ವಾನಿತರಿಗೆ ಪುಷ್ಪ ಮತ್ತು ಸಿಹಿಯನ್ನಿತ್ತು ಸತ್ಕರಿಸಲಾಯಿತು.

ಬಟ್ಟೆಗೆ ಕಷ್ಟ

ಬರ್ಹಾಂಪುರ — ಪಶ್ಚಿಮ ಬಂಗಾಳದ ಈ ಊರಿನಲ್ಲಿ ಬಟ್ಟೆಗೆ ತುಂಬ ಕಷ್ಟವಾಗಿದೆ.

ವಹಿಸಿಕೊಂಡರು

ಕಟಕ್ — ಶ್ರೀ ವಿ. ಪಿ ಮೆನನ್ ರಿಂದ ಶ್ರೀ ಅಸಫ್‌ಅಲಿ ಒರಿಸ್ಸ ಗವರ್ನರ ಹುದ್ದೆಯನ್ನು ವಹಿಸಿಕೊಂಡರು.

ಧಾನ್ಯ ಸಾಗಾಣಿಕೆ ರೈಲು

ಕಲ್ಕತ್ತಾ — ಶ್ರೀ ಜಯಪ್ರಕಾಶ ನಾರಾಯಣರು ಹೇಳಿಕೆ ಇತ್ತು ಮುಷ್ಕರಕಾಲದಲ್ಲಿ ಆಹಾರ ಸಾಗಿಸಲು ಕೆಲಸಗಾರರು ಸಹಕರಿಸುವರೆಂದು ತಿಳಿಸಿದ್ದಾರೆ.

ಬಹಿರಂಗವಾಯಿತು

ಶ್ರೀನಗರ — ಅರು ಮಂದಿ ಪಾಕೀ ಸ್ತಾನ ಗೂಢಚಾರರ ರಹಸ್ಯ ಬಹಿರಂಗವಾಗಿದೆ ಜಮ್ಮು ಮತ್ತು ಕಾಶ್ಮೀರಕ್ಕೆ ಪ್ರವೇಶಿಸಿ ಅವರು ಅಲ್ಲಿ ಅವ್ಯವಸ್ಥೆ ಕಲ್ಪಿಸಲು ಪ್ರಯತ್ನಿಸಿದ್ದರು

ಆಟದ ಸಮಾರಂಭ

ಹಿರಿಯೂರ ಬಳಗ, ವನಿತಾ ಸದನ ಮೈಸೂರು ಇವರ ಆಶ್ರಯದಲ್ಲಿ ನಿನ್ನೆ ಶ್ರೀವಸ್ಮಹಾರಾಜರ ವರ್ಧಂತ್ಯುತ್ಸವದ ಅಂಗವಾಗಿ ನಿನ್ನೆ ವಸ್ಕಳ ಆಟದ ಸಮಾರಂಭ ಏರ್ಪಡಿಸಲಾಗಿತ್ತು

ವಾರ್ಷಿಕೋತ್ಸವ

ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಮೊನ್ನೆ ಸಂಜೆ ಸಾಧ್ವಿ ಪತ್ರಿಕೆಯ 9 ನೇ ವಾರ್ಷಿಕೋತ್ಸವ ವೈಭವದಿಂದ ನೆರವೇರಿತು. ಶ್ರೀ ಅಗರಂ ರಂಗಯ್ಯನವರು ಸ್ವಾಗತ ಭಾಷಣ ಮಾಡಿದರು ಶ್ರೀ ಪಿ ಸತ್ಯವತಿಯವರಿಂದ ಕಾವ್ಯವಾಚನ ಏರ್ಪಾಟಾಗಿತ್ತು

ಹೊಸ ಪಕ್ಷ

ತಿರುಚೂರು — ಕೊಚ್ಚಿ ಪಕ್ಷ ವೆಂಬುದು ಸ್ಥಾಪನೆಯಾಗಿ ತಿರುವಾಂಕೂರಿನಿಂದ ಕೊಚ್ಚಿ ಬೇರ್ಪಡಬೇಕೆಂಬ ಘೋಷಣೆಯೊಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸುವದು.

ಪಾಕಿಸ್ತಾನಕ್ಕೆ ನೆಹರು ಸೂಚನೆ —

ಭಾರತದ ಮೇಲೆ ಆಕ್ರಮಣ ಇಚ್ಛೆ ಇಲ್ಲವೆಂದು ಘೋಷಣೆ ಮಾಡಿ !

ನವದೆಹಲಿ — ಪಾಕಿಸ್ತಾನವನ್ನು ಆಕ್ರಮಣ ಮಾಡುವ ಯಾವುದೇ ಇಚ್ಛೆಯೂ ಭಾರತಕ್ಕೆ ಇಲ್ಲ ಅಥವಾ ಆವುದೇ ಸಮಸ್ಯೆಗೂ ಬಲದಿಂದ ನಿರ್ಧರಿಸು ಇಚ್ಛೆಯಿಲ್ಲ ಆದರೆ ಕಾಶ್ಮೀರವು ಸೇರಿ ಭಾರತವು ಪಾಕಿಸ್ತಾನದಿಂದ ಆಕ್ರಮಣ ಮಾಡಲ್ಪಟ್ಟರೆ ಭಾರತವು ಸ್ವರಕ್ಷಣೆಗಾಗಿ ಎಲ್ಲ ಕ್ರಮಗಳನ್ನು ಕೈಗೊಳ್ಳುವದು ಈಗಿನ ತೀವ್ರ ಪರಿಸ್ಥಿತಿಯನ್ನು ಪರಿಹರಿಸಲು ಬೇಕಾಗಿರುವದೇನೆಂದರೆ ಭಾರತದ ಮೇಲೆ ಅಭಿಯೋಗ ಅಥವ ಆಕ್ರಮಣ ಮಾಡುವ ಉದ್ದಿಶ್ಯವಿಲ್ಲವೆಂದು ನಿಮ್ಮ ಸರ್ಕಾರ ಘೋಷಿಸಬೇಕು— ಎಂದು ಪಾಕ್ ಪ್ರಧಾನಿ ಲಿಯಾಕತ್ ರಿಗೆ ಕಳಿಸಿದ ತಾರಿನಲ್ಲಿ ಪಂ| ನೆಹರು ತಿಳಿಸಿದ್ದಾರೆ

ಎರಡೂ ರಾಷ್ಟ್ರಗಳಿಂದ ಸಮರಕೂಡದೆಂಬ ಘೋಷಣೆಯ ಸಲಹೆಯನ್ನು ಪಂ|| ನೆಹರು ಸೂಚಿಸಿದ್ದಾರೆ

ಪಾಕ್‌ನ್ನು ಎದುರಿಸುತ್ತೇವೆ

ಹೈದರಾಬಾದ್ — ಇಲ್ಲಿನ ಮುಸ್ಲಿಂ ನಾಯಕ ಶ್ರೀ ಅಕ್ಬರ್ ಅಲಿಯವರು ಹೇಳಿಕೆಯಿತ್ತು, ಪಾಕಿಸ್ತಾನವೇನಾದರೂ ಭಾರತದ ಮೇಲೆ ಬಿದ್ದಲ್ಲಿ ಭಾರತದ ಮುಸ್ಲಿಮರು ಅದನ್ನೆದುರಿಸುವರು ಎಂದು ತಿಳಿಸಿರುವರು,

---

ಅಬರ್ಡೀನ್— ಜು 22 ಪರ್ಸಿಯಾ ದಿಂದ ಲಕ್ಷಗಟ್ಟಲೆ ಗ್ಯಾಲನ್ ಪೆಟ್ರೋಲು ಕೊಂಡು ಕೊಳ್ಳುವುದಾಗಿಯೂ, ಅದನ್ನು ಸಾಗಿಸಲು ತನ್ನ ಟ್ಯಾಂಕರುಗಳನ್ನೇ ಉಪಯೋಗಿಸಲಾಗುವುದೆಂದೂ ಒಂದು ಕಂಪೆನಿಯವರ ಪರ್ಸಿಯಾ ಎಣ್ಣೆ ರಾಷ್ಟ್ರೀಕರಣ ಬೇಡಿಕೆಗೆ ಬರೆದು ಕೊಂಡಿದ್ದಾರೆ

ಪಾಕ್‌ಗೆ ಸಹಾಯವಿಲ್ಲ !

ಭಾರತ-ಪಾಕಿಸ್ತಾನ ಪರಿಸ್ಥಿತಿ ಕುರಿತು ಮ್ಯಾಂಚೆಸ್ಟರ್ ಗಾರ್ಡಿಯನ್ ಲೇಖನ ಬರೆದು ಸಮರವೇನಾದರೂ ಸಂಭವಿಸಿದಲ್ಲಿ ಪಾಕಿಸ್ತಾನಕ್ಕೆ ಹೊರಗಿನಿಂದ ಸಹಾಯ ಸಿಗಲಾರದೆಂದು ತಿಳಿಸಿದೆ

ಬೆಂಗಳೂರು— ಜು 21 ಡಿ. ವಿ. ರಾಜಗೋಪಾಲ್ ಎಂಬುವರು ತಾವು ಕಂಡು ಹಿಡಿದಿರುವ ಗಂಟೆಗೆ 1200 ಗಜ ದಾರ ತೆಗೆಯಬಲ್ಲ ತನ್ನ ಚರಕ ಮುಖ್ಯ ಮಂತ್ರಿ ಶ್ರೀ ರೆಡ್ಡಿಯವರ ಮುಂದೆ ಪ್ರದರ್ಶಿಸಿದರು.

ಹೈದರಾಬಾದ್‌ನ ಸಿಟಿ ಮ್ಯಾಜಿಸ್ಟ್ರೇಟರಿಗೆ ಕಮ್ಯುನಿಸ್ಟ್ ನಾಯಕ ಶ್ರಿ ಎ ಕೆ ಗೋಪಾಲರ್ ಅರ್ಜಿ ಸಲ್ಲಿಸಿ ತಮ್ಮ ಮೇಲೆ ಭಾಷಣ ಮಾಡಕೂಡದೆಂದು ವಿಧಿಸಿರುವ ಆಜ್ಞೆಯನ್ನು ರದ್ದುಗೊಳಿಸಬೇಕೆಂದು ಕೋರಿದ್ದಾರೆ

ನವದೆಹಲಿ — ಕಾಶ್ಮೀರ ಮಧ್ಯಸ್ಥಿಕೆಗಾರರಾದ ಡಾ|| ಗ್ರಹಾಂ ನಿನ್ನೆ ಪಂ| ನೆಹರುವನ್ನು ಸಂದರ್ಶಿಸಿದರು

ಒಂಗಾರುಪೇಟೆಯು ಒಂದು ಗ್ರಾಮದಿಂದ 16 ಮೂಟೆ ರಾಗಿ ಸಾಗಿಸುತ್ತಿದ್ದುದನ್ನು ಪೋಲೀಸರು ಪತ್ತೆಮಾಡಿ ರಾಗಿಯನ್ನು ವಶಪಡಿಸಿಕೊಂಡು ಅಸಾಮಿಯ ಮೇಲೆ ಮೊಕದ್ದಮೆ ಹಾಕಿದ್ದಾರೆ.

ಕರಾಚಿ — ಪಾಕಿಸ್ತಾನ ಪಂಜಾಬ್ ಮಂತ್ರಿಮಂಡಲ ನಾಳೆ ಸಭೆ ಸೇರಿ ಪಾಕ್ ಗಡಿಯಲ್ಲಿ ಸೇನೆ ಜಮಾವಣೆ ಕುರಿತು ಪರಿಶೀಲಿಸುತ್ತದೆ

ಮುಂದಿನ ಮಾಹೆ 8 ನೇ ತಾರೀಖಿನೊಳಗೆ ತಮ್ಮ ಬೇಡಿಕೆಯನ್ನೀಡೇರಿಸದಿದ್ದರೆ ಮುಷ್ಕರ ಹೂಡುವದಾಗಿ ಶಿವಮೊಗ್ಗ ಜಾಡಮಾಲಿಗಳು ತಿಳಿಸಿದ್ದಾರೆ

ಬಂಗಾಳ ಗಡಿಯಲ್ಲಿ ಪಾಕಿಸ್ತಾನ -ಸೇನೆ ಜಮಾವಣೆ ಜರುಗಿದೆ

ಕಲ್ಕತ್ತಾ — ಫಾ ಮಾ ಅಕ್ಕಿ ಲೇ ಕ್ ಮತ್ತು ಜಾ| ಗ್ರೇಸಿ ಯೋಜನೆಯಂತೆ ಇಬ್ಬರು ಬ್ರಿಟೀಷ ಅಧಿಕಾರಿಗಳು ಬಂಗಾಳ ಗಡಿಯಲ್ಲಿ ಸೇನೆ ಜಮಾವಣೆ ಮಾಡಲು ಕಾರ್ಯಗತರಾಗುತ್ತಿರುವದಾಗಿ ವರದಿ ಆಗಿದೆ

ನಿಯಂತ್ರಣ ಜಾರಿ

ಲಾಹೋರ್ — ಪಾಕಿಸ್ತಾನದ ಪಂಜಾಬಿನಲ್ಲಿ ಟೈರ್ ಮತ್ತು ಟ್ಯೂಬುಗಳ ನಿಯಂತ್ರಣ ಜಾರಿ ಮಾಡಲಾಗಿದೆ × ಸೇಲಾನಲ್ಲಿ 12 ಸಹಸ್ರ ಟನ್ ಭತ್ತ ಎಕ್ಕೆಗೆ ಬೆಳೆದುರಿಕಾರ್ಡ್ ಸ್ಥಾಪಿಸಲಾಗಿದೆ

ಗಾಂಧಿ ಮತ್ತು ಗುರು ಗೋವಿಂದ್

ಗಾಂಧಿಯವರು ತಮ್ಮ ಪ್ರಾರ್ಥನೆಯಲ್ಲಿ ಹೀಗೆ ಹೇಳುತ್ತಿದ್ದರು—

ಈಶ್ವರ ಅಲ್ಲಾ ತೇರೇನಾಂ
ಸುಂದಿಲ ಮುಜ್ಜಿದ್ ತೇರೇ ಧಾಂ |
ಸಬ್‌ಕೋ ಸನ್ಮತಿ ದೇ ಭಗವಾನ್ ||

ಶ್ರೀ ಗುರುಗೋವಿಂದರ ಬೋಧೆಯೂ ಈ ಬಗೆಯದೇ ಆಗಿದೆ. ನೋಡಿ—

ಕರ್ತಾ ಕರೀಂ ಸೋ ಈ |
ರಜಾಕ್ ರಹೀಂ ಅ ಈ |
ದ ಸರೋ ನ ಭೇದ ಕೋ ಈ |
ಭೂಲ್ ಭ್ರಮವಾ ಭೋ ||

ಕರ್ತ ಅಂದರೆ ಸೃಷ್ಟಿಕರ್ತನು. ಅವನೇ ಕರೀಂ, ರಜಾಕ್ ಮತ್ತು ರಹೀಂ, ಇವರಲ್ಲಿ ಭೇದವಿಲ್ಲ.

ದೇಹರಾ ಮಸೀದ್ ಸೋ ಈ |
ಪೂಜಾ ನವಾಜ್ ಅ ಈ ||

ದೇವಾಲಯ ಮತ್ತು ಮಸೀದಿಗಳು ಒಂದೇ : ಹಾಗೆಯೇ ಪೂಜಾ ಮತ್ತು ನಮಾಜುಗಳು ಒಂದೇ.

ಅಲ್ಲಾ ಅಭೇಖ್ ಸೋ ಈ |
ಪುರ್ಜಾ ಪುರ್ಜಾ ಓ ಈ ||

ಅಲ್ಲಾ ಮತ್ತು ಅಭೇಖ್ ಇಬ್ಬರೂ ಒಂದೇ : ಪುರ್ಜಾ ಪುರ್ಜಾ ಎಂಡೂ ಒಂದೇ. (ಓಂ)

ಸಾಕಷ್ಟು ಅಕ್ಕೀ ತರಿಸ್ತಾರಂತೆ

ನವದೆಹಲಿ ಜು 20— ಭಾರತ ಸರಕಾರವು ಸಾಕಷ್ಟು ಅಕ್ಕಿಯನ್ನು ಎಲ್ಲಿಂದಾದರೂ ತರಿಸುವುದೆಂದು ಆಹಾರಶಾಖಾ ಉಪ ಮಂತ್ರಿ ಶ್ರೀ ತಿರುಮಲರಾಯರು ತಿಳಿಸಿರುವರು.

ಪೀಟರ್. ನಿಧನ

ಪ್ಯಾರಿಸ್ ಜೂನ್ 23— ಹಿಂದೆ ಫ್ರಾನ್ಸಿನ ಮಹಾ ವೀರನಾಗಿದ್ದ ಮಾರ್ಷಲ್ ಪೀಟ್ಯ ತನ್ನ 95 ನೇ ವಯಸ್ಸಿನಲ್ಲಿ ಖೈದಿಯಾತನದಲ್ಲಿ ಕಾಲವಾದನು.

ವಿಮಾನ ಧಾಳಿ ಭೀತಿಯೇ?

ಲಾಹೋರು ಜುಲೈ 23— ಪಾಕೀ ಸ್ಥಾನೀ ಪಂಜಾಬಿನ ರಾಜಧಾನಿ ಲಾಹೋರಿನಲ್ಲಿ ನಾಳೆ ಎರಡು ಗಂಟೆ ಬ್ಲಾಕ್ ಔಟ್ ನಡೆಸಲಾಗಿದೆ. ಭಾರತ ವಿಮಾನ ಧಾಳಿ ಭಯವೇನೋ ?

ನೀರುಳ್ಳಿ ಬೆಳೆ

೧೯೫೦-೫೧ ನೇ ವರ್ಷದಲ್ಲಿ ಮದರಾಸು ಪ್ರಾಂತ್ಯದಲ್ಲಿ ೫೫೬೦೦ ಎಕ್ರೆ ಸ್ಥಳದಲ್ಲಿ ನೀರುಳ್ಳಿ ಬೆಳೆಯಾಗಿದೆ. ಹಿಂದಿನ ವರ್ಷ ೬೦೬೦೦ ಎಕ್ರೆ ಸ್ಥಳದಲ್ಲಿ ಬೆಳೆಯಾಗಿತ್ತು.

ಶಿಸ್ತು ಉಲ್ಲಂಘನೆಗೆ

ಪಾಕಿಸ್ಥಾನ ಪಂಜಾಬು ಮುಸ್ಲಿಂ ಲೀಗಿನಿಂದ ಶಿಸ್ತು ಉಲ್ಲಂಘಿಸಿದ ೫೦೦ ವಂದಿಯನ್ನು ಐದು ವರ್ಷಗಳತನಕ ಸದಸ್ಯತನದಿಂದ ತೆಗೆದುಹಾಕಿರುವರು.

Kann. (Eng. 471)

ಯುದ್ಧ ಮತ್ತು ರೋಗ

ಎಲ್ಲಾ ದೇಶಗಳ ಚರಿತ್ರೆ ಲೇಖಕರು ಬರೆದಿರುವ ಪ್ರಪಂಚ ಚರಿತ್ರೆಯು ಪೂರ್ಣ ಜನಾಂಗಗಳ ಅದೃಷ್ಟವನ್ನೇ ತೀರ್ಮಾನಿಸಿದ ಯುದ್ಧ ಮತ್ತು ಹೊಡೆದಾಟಗಳನ್ನೇ ಪದೇಪದೇ ತಿಳಿಸುತ್ತದೆ ಈ ಸಂಬಂಧದ ಪಾಳ್ಯೆಗಳನ್ನು ನಾವು ಪರೀಕ್ಷಿಸಿದರೆ, ಈ ಕದನದಲ್ಲಿನ ಜಯಾಪಜಯಗಳು ಯಾವಾಗಲೂ ಪ್ರತಿಭೆ ಅಥವಾ ಆದಿಲ್ಲದಿರೋಣದರ ಮೇಲೆ ಅವಲಂಬಿಸಿದ್ದಿಲ್ಲವೆಂಬುದನ್ನು ಅರಿಯಲು ಆಶ್ಚರ್ಯವಾಗುತ್ತದೆ. ಆದರೆ ಇವು ಯುದ್ಧರಂಗದಸೇನೆಯ ಆರೋಗ್ಯವನ್ನು ಬಾಳಿಕಡಹುವ ರೋಗಗಳ ಮೇಲೆ ಅನೇಕಾವರ್ತಿ ನಿರ್ಧರಿಸಲಾಗಿದೆ.

ಈ ಬಗ್ಗೆ ವನಸ್ಸಿಗೆ ನಾಟುವಂತಹ ಒಂದು ಉದಾಹರಣೆಯೆಂದರೆ ಬಹು ಮಂದಿ ಸೈನಿಕರು ಖಾಯಿಲೆಯಿಂದ ನರಳಾಟದ ಕಾರಣಕ್ಕಾಗಿ ಮಾಸ್ಕೋ ವಿನಿಂದ ನೆಪೋಲಿಯನ್ನಿನ ವಿಖ್ಯಾತ ವಾಪಸಾತಿಯಾಗಿದೆ. ಇಂತಹ ಯುದ್ಧಗಳಲ್ಲಿಯೂ ಅಂಕಿ ಅಂಶಗಳು ಅಗಾಧವಾಗಿಯೇ ಇದ್ದುವು. ಕ್ರಿಮಿಯಾ ಯುದ್ಧದಲ್ಲಿ 50,000 ಫ್ರೆಂಚರು, 17,000 ಬ್ರಿಟಿಷರು, ಮತ್ತು 37,000 ರಷ್ಯನ್ನರು ಸಾಂಕ್ರಾಮಿಕ ವ್ಯಾಧಿಗಳಿಂದ ನರಳಿದರು. ಎರಡು ಪ್ರಪಂಚ ಮಹಾ ಯುದ್ಧಗಳಲ್ಲೂ, ರೋಗಗ್ರಸ್ತರಾದವರ ಸಂಖ್ಯೆ ಬಹು ಹೆಚ್ಚಾಗಿದ್ದಿತು. ಬಹುಹೆಚ್ಚು ಸೈನಿಕರ ಹೋಗಿಬರೋಣದರಿಂದ, ಮಲೇರಿಯ ಅಗಾಧವಾಗಿ ಹರಡಿತು.

ಮುಖ್ಯವಾಗಿ ಈ ಮಲೇರಿಯಾ ಖಾಯಿಲೆಯು ಅಂತಹ ಆಪತ್ತನ್ನು ಒದಗಿಸಶಕ್ಯದ್ದಾಗಿದೆ. ಅದಕ್ಕಾಗಿ ವೈದ್ಯಕೀಯ ಶಾಸ್ತ್ರವು ಈ ಸಮಸ್ಯೆಯನ್ನು ದೀರ್ಘ ಪರಿಶೋಧನೆಗಾಗಿ ಒಳಪಡಿಸಿದೆ. ಮುಖ್ಯವಾಗಿ ಹಿಂದಿನ ಲೀಗ್ ಆಫ್ ನೇಷನ್ನಿನವರು ನೇಮಿಸಿದ್ದ ನಿಪುಣ ಮಲೇರಿಯಾ ಕಮಿಷನ್ನಿನವರ ಕಾರ್ಯವನ್ನು ನಾವು ನಮೂದಿಸಲಿಚ್ಛಿಸುತ್ತೇವೆ. ಅವರು 1938 ರಲ್ಲಿ ಒಂದು ವಂದಿ ಪ್ರಕಟಿಸಿ ಪೂರ್ತಿ ಮಲೇರಿಯಾ ಕಾಲದಲ್ಲಿ ದಿನವಹಿ 6 ಗ್ರೇನು ಕ್ವಿನೈನು ಸೇವನೆಯನ್ನೂ ಮತ್ತು ರೋಗಕ್ಕೆ ಉಗ್ರವಾಗಿ ತುತ್ತಾದಾಗ 5-7 ದಿನಗಳು ದಿನವಹಿ 15 ರಿಂದ 20 ಗ್ರೇನು ಕ್ವಿನೈನು ಸೇವನೆಯನ್ನೂ ಶಿಫಾರಸ್ ಮಾಡಿರುತ್ತಾರೆ

OPERA

July 25th

Bonnie Prince Charlie

(Technicolor)

Starring — David Niven
Margaret Leighton

— Next —

711 Ocean Drive

ಉಡ್‌ಲಾಂಡ್ಸ್

ದುಲ್‌ಖುಷ್ ಪಂಜೋಲಿಯವರ

ನಗೀನಾ

— 3 ನೇ ವಾರ —

— ಪಾಶ್ಚ —

ನೂರ್ಜ, ನಾಸಿಂ ಬಾಕ್, ಗೋಪ್

ಪ್ರತಿ ದಿನ 3 ಪ್ರದರ್ಶನಗಳು

ರಣಜಿತ್ ಅಮೋಘ 3 ನೇ ವಾರ

ಅಶೋಕಕುಮಾರ್, ನಿಮ್ಮಿ, ದಿಲೀಪಕುಮಾರ್, ನರ್ಗಿಸ್ ನಟಿಸಿರುವ

ದೀದಾರ್ [ಹಿಂದಿ] Deedar

ಪ್ರತಿ ದಿನ 3 ಆಟಗಳು

For Quality Printing
L. N. Press
Sivarampet, Mysore

ಶಕ್ತಿಸುಧಾ

— ಉತ್ತಮವಾದ ಟಾನಿಕ್ —

ಮೈಸೂರು ಉಕ್ಕನ್ನು ಬಳಸಿ

ಮೃದುವಾದ ಉಕ್ಕಿನ ಪಟ್ಟಿಗಳು,

ಮೈಸೂರು

- ದುಂಡು,
- ಚೌಕೋನ,
- ಸರಳುಗಳು,
- ಮೂಲೆಗಂಬಗಳು
- ಬೇಲುಕಟ್ಟುಗಳು

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

Edited, Printed and Published by M. S. Krishna Rao. at the Satyavadi Press Chamrajpuram Mysore